**ಪ್ರಧಾನ ಜಿಲ್ಲಾ ಮತ್ತು ಸತ್ರ/ವಿಶೇಷ ನ್ಯಾಯಾಧೀಶರ ನ್ಯಾಯಾಲಯ ,**
**ಉಡುಪಿ ಜಿಲ್ಲೆ , ಉಡುಪಿ**

ಸ್ಪೆಷಲ್ ಕೇಸ್ ನಂಃ 54/2022 ಪಿ.ಡಬ್ಲ್ಯೂಃ 4

ಸಿ.ಡಬ್ಲ್ಯೂಃ 4

| | |
|---|---|
| ಸಾಕ್ಷಿದಾರರ ಹೆಸರು | ಜಯಕರ |
| ತಂದೆಯ ಹೆಸರು | ಕುಡ್ವ |
| ವಯಸ್ಸು | 24 ವರ್ಷ |
| ಉದ್ಯೋಗ | ಆಳ್ವಾಸ್ ನಲ್ಲಿ ಕ್ಲಿನಿಂಗ್ ಕೆಲಸ |
| ವಿಳಾಸ | ಪಾದೇಬೆಟ್ಟು, ಕುಚ್ಚಿಗುಡ್ಡೆ |

ದಿನಾಂಕಃ 24-07-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದ**

1) ನನಗೆ ಚಾಸಾ -1 ಗೊತ್ತು. ನನಗೆ ಪಂಚಾಯಿತಿಯಲ್ಲಿ ಕಸ ವಿಲೇವಾರಿಯ ಕೆಲಸ ಮಾಡುತ್ತಿದ್ದಾಗ ಗೊತ್ತು. ಚಾಸಾ-1 ಇವರು ಕಸವಿಲೇವಾರಿಯ ಕೆಲಸವನ್ನು ನೋಡಿಕೊಳ್ಳುತ್ತಿದ್ದರು. ಕಸವಿಲೇವಾರಿ ಘಟಕ ಹಳೇ ಮೀನು ಮಾರ್ಕೆಟ್ ಬಳಿ ಇತ್ತು. ಚಾಸಾ-3 ನನ್ನ ಅಣ್ಣ. ಆತನೂ ಕೂಡಾ ಚಾಸಾ-1 ಇವರ ನನ್ನಂತೆ ಕೆಲಸ ಮಾಡುತ್ತಿದ್ದ. ಕಸ ಸಂಗ್ರಹಿಸಲು ವಾಹನವನ್ನು ಪಂಚ್ಯಾತಿಯವರು ನೀಡಿದ್ದರು. ಆಗ ವಾಹನದ ಚಾಲಕ ಚಾಸಾ-2 ಆಗಿದ್ದ. ಪಂಚ್ಯಾತಿಯಲ್ಲಿ ಸುಮಾರು 3 ಸಾವಿರ ಮನೆಗಳಿಂದ ಕಸವನ್ನು ಸಂಗ್ರಹಿಸುತ್ತಿದ್ದೆವು. ಆ ಕಸವನ್ನು ವಿಲೇವಾರಿ ಘಟಕದಲ್ಲಿ ಹಾಕುತ್ತಿದ್ದೆವು. ಅಲ್ಲಿ ಒಣ ಕಸ ಮತ್ತು ಹಸಿ ಕಸವನ್ನು ಬೇರ್ಪಡಿಸುತ್ತಿದ್ದೆವು. ಬೇರ್ಪಡಿಸಿದ ಒಣ ಕಸವನ್ನು ನಿಟ್ಟೆಗೆ ವಾರಕ್ಕೊಮ್ಮೆ ತೆಗೆದುಕೊಂಡು ಹೋಗತ್ತಿದ್ದೆವು. ಹಸಿ ಕಸವನ್ನು ಗೊಬ್ಬರ ಮಾಡುತ್ತಿದ್ದೆವು. ವಿಂಗಡಣೆಯ ನಂತರ ವಿಲೇ ಆಗದೇ ಇದ್ದ ಕಸವನ್ನು ಗೋಣಿ ಚೀಲಗಳಲ್ಲಿ ಕಟ್ಟಿ ಇಡುತ್ತಿದ್ದೆವು. ಇದರಿಂದ ಸಾರ್ವಜನಿಕರಿಗೆ ಸಮಸ್ಯೆಯಾಗಿ ದೂರು ನೀಡಿದ್ದರು. ಅದಕ್ಕಾಗಿ ಪಂಚ್ಯಾತಿಯವರು ಪರ್ಯಾಯ ವ್ಯವಸ್ಥೆ ಮಾಡಿ ಪೊಳ್ಯ

ಗ್ರಾಮದಲ್ಲಿ ಹಾಕಬೇಕೆಂದು ತೆಗೆದುಕೊಂಡು ಹೋಗಿದ್ದೆವು. ಪ್ರೊಲ್ಯದಲ್ಲಿ ಕಸವನ್ನು ಹಾಕಬೇಕೆಂದು ನಮಗೆ ಚಾಸಾ -1 ಜಾಗ ತೋರಿಸಿದ್ದರು.

2) ಸುಮಾರು 3 ವರ್ಷಗಳ ಹಿಂದೆ ಬೆಳಿಗ್ಗೆ 7.30 ಗಂಟೆಗೆ ಚಾಸಾ-1 ಇವರು ನಮಗೆ ಹಳೇ ಕಸ ವಿಲೇವಾರಿ ಘಟಕಕ್ಕೆ ಬರಲು ಹೇಳಿದ್ದರು. ಆಗ ನಾನು ಹೋದಾಗ ಅಲ್ಲಿ ಚಾ.ಸಾ-1, 2 ಮತ್ತು ಇನ್ನೊಂದು ವಾಹನ ಮತ್ತು ಅದರ ಚಾಲಕ ಇದ್ದರು. ಅಲ್ಲಿದ್ದ ಕಸದ ಮೂಟೆಗಳನ್ನು ಲಾರಿಗೆ ತುಂಬಿಸಿದ್ದೆವು. ಆಗ ನನ್ನೊಂದಿಗೆ ಚಾಸಾ-3 ಮತ್ತು ಇನ್ನೂ ಇಬ್ಬರು ಕೆಲಸಗಾರರು ಇದ್ದರು. ಆದಿನ ನಾನು, ಚಾಸಾ-3 ಮತ್ತು ಉಳಿದವರು ಟೆಂಪೋದಲ್ಲಿ ಹೋಗಿದ್ದೆವು. ಚಾಸಾ-1 ಮತ್ತು 2 ಕಾರಿನಲ್ಲಿ ಬಂದಿದ್ದರು. ನಾವು ಪ್ರೊಲ್ಯ ಜಾಗೆಗೆ ತಲುಪಿದ್ದೆವು. ಅದು ರಸ್ತೆಯ ಬದಿಯ ಜಾಗೆ, ಅಲ್ಲಿಂದ ಕಸ ಹಾಕಬೇಕಾಗಿದ್ದ ಜಾಗೆ ಸುಮಾರು 80 ಮೀಟರ್ ಗಳ ಅಂತರ. ರಸ್ತೆ ಬದಿಯಿಂದ ಕಸ ಹಾಕಬೇಕಾಗಿದ್ದ ಜಾಗೆಗೆ ವಾಹನ ಹೋಗುತ್ತಿರಲಿಲ್ಲ. ನಾವು ನಮ್ಮ ಕಸದ ವಾಹನ ನಿಲ್ಲಿಸಿ 10 ಮೂಟೆಗಳನ್ನು ಇಳಿಸಿದ್ದೆವು. ಅಲ್ಲಿಗೆ ಒಬ್ಬರು ಸ್ಕೂಟಿಯಲ್ಲಿ ಬಂದು, ಕಸವನ್ನು ತೆಗೆಯಬಾರದೆಂದು, ಹೇಳಿ ಚಾಸಾ-1 ಇವರೊಂದಿಗೆ ಜೋರಾಗಿ ಮಾತನಾಡಿದ್ದರು ಮತ್ತು ಮೊಬೈಲ್ ನ್ನು ಒಡೆದಿದ್ದರು. ಅದನ್ನು ನೋಡಿ ನನಗೆ ಹೆದರಿಕೆ ಆಗಿತ್ತು. ಚಾಸಾ-3 ಈತನಿಗೆ ನನ್ನನ್ನು ಕರೆದುಕೊಂಡು ಹೋಗಲು ಹೇಳುತ್ತಿದ್ದೆ. ಆದಿನ ಗಲಾಟೆ ಮಾಡಿದವರು ಮನೋಜ್ ಎನ್ನುವವರು, ಅವರು ಈದಿನ ನ್ಯಾಯಾಲಯದಲ್ಲಿ ಇದ್ದಾರೆ. ಆದಿನ ನನಗೆ ಮೊಬೈಲ್ ಹಾಳಾಗಿದ್ದು ಮಾತ್ರ ಗೊತ್ತು, ಉಳಿದಂತೆ ಹೆದರಿಕೆ ಆಗಿತ್ತು. ಅಲ್ಲಿ ಏನಾಗಿತ್ತು ಎಂದು ನಾನು ನೋಡಲು ಆಗುತ್ತಿರಲಿಲ್ಲ. ನನ್ನನ್ನು ಚಾಸಾ-3 ಈಚೆ ಕರೆದುಕೊಂಡು ಬಂದಿದ್ದ. ಆಗ ಸಮಯ ಎಷ್ಟು ಎಂದು ನೆನಪಿಲ್ಲ. ಅಲ್ಲಿಗೆ ಬಂದಿದ್ದ ಆರೋಪಿ ಎಷ್ಟು ಹೊತ್ತು ಅಲ್ಲಿ ಇದ್ದ ಎಂದು ನನಗೆ ಗೊತ್ತಿಲ್ಲ. ಅಲ್ಲಿ ಇದ್ದ ಅನ್ ಲೋಡ್ ಮಾಡಿದ್ದ ಕಸವನ್ನು ಪುನಃ ಲೋಡ್ ಮಾಡಿಕೊಂಡು ತಂದು, ವಿಲೇವಾರಿ ಘಟಕದಲ್ಲಿ ಹಾಕಿದ್ದೆವು.

3) ಆ ಸಮಯ ಅಲ್ಲಿಗೆ ಪಿಡಿ ಓ ಬಂದಿದ್ದರು. ಆಸಮಯದಲ್ಲಿ ಚಾಸಾ-1 ಇವರಿಗೆ ಪೆಟ್ಟಾಗಿದ್ದ ಬಗ್ಗೆ ನನಗೆ ಗೊತ್ತಿಲ್ಲ. ಚಾಸಾ-1 ಇವರು ಆಸ್ಪತ್ರೆಯಲ್ಲಿ ಉಪಚಾರದ ಪಡೆದ ಬಗ್ಗೆ ನನಗೆ ಗೊತ್ತಿಲ್ಲ. ನಂತರ ಪೊಲಿಸರು ನನ್ನನ್ನು ವಿಚಾರಿಸುತ್ತಿದ್ದಾಗ ಚಾಸಾ-1

ಕೊಟ್ಟ ದೂರಿನ ಬಗ್ಗೆ ಗೊತ್ತಾಯಿತು. ಚಾಸಾ-1 ಇವರು ಯಾವ ಜಾತಿಯವರು ಎಂದು ಗೊತ್ತಿಲ್ಲ. ಆರೋಪಿಯದ್ದು ಯಾವ ಜಾತಿ ಎಂದು ಗೊತ್ತಿಲ್ಲ. ಪೊಲೀಸರು ನನ್ನನ್ನು ವಿಚಾರಿಸಿದ್ದರು.

**( ಈ ಹಂತದಲ್ಲಿ ಸರಕಾರಿ ಅಭಿಯೋಜಕರ ವಿನಂತಿಯ ಮೇರೆಗೆ ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಸರಕಾರಿ ಅಭಿಯೋಜಕರಿಗೆ ಅನುಮತಿ ಕೊಡಲಾಯಿತು)**

**ಪಾಟಿಸವಾಲು: ಸರಕಾರಿ ಅಭಿಯೋಜಕರಿಂದ:**

1) ಆದಿನ ಆರೋಪಿ ಬಂದು ಚಾಸಾ -1 ಇವರೊಂದಿಗೆ ಜಗಳ ಮಾಡಿದಾಗ ಬೆಳಗ್ಗಿನ 8.45 ರ ಸಮಯ ಎಂದರೆ ಇರಬಹುದು. ಆದಿನ ಅರೋಪಿ ಚಾಸಾ -1 ಇವರಿಗೆ ಇದು ಯಾರ ಅಪ್ಪನಾ ಜಾಗ ಎಂದು ಕಸ ಹಾಕುತ್ತಿದ್ದೀರಿ ಎಂದು ಹೇಳಿದ್ದ ಎಂದರೆ ಗೊತ್ತಿಲ್ಲ. ಆ ಜಾಗೆಯನ್ನು ಪಂಚ್ಯಾತಿಯವರು ತೋರಿಸಿ ಕೊಟ್ಟಿರುವುದಾಗಿ ಹೇಳಿ, ಚಾಸಾ-1 ಇವರು ಪಿ ಡಿ ಓ ಇವರಿಗೆ ಮಾತನಾಡಲು ಫೋನ್ ತೆಗೆಯುತ್ತಿದ್ದರು ಎಂದರೆ ಗೊತ್ತಿಲ್ಲ. ಆಗ ಆರೋಪಿ ನಮ್ಮ ಕಡೆಗೆ ಹೊಡೆಯಲು ಬರುತ್ತಿದ್ದ, ಆಗ ಚಾಸಾ-1, ಅರೋಪಿಗೆ ನಮ್ಮ ಮೈ ಮುಟ್ಟಬಾರದು ಎಂದು ಹೇಳಿದ್ದರು ಎಂದರೆ ಗೊತ್ತಿಲ್ಲ. ಆಗ ಆರೋಪಿ ಚಾಸಾ-1 ಇವರಿಗೆ ''ಸೂಳೇ ರಂಡೇ ಎಂದು ಬೈದು, ಕೀಳು ಜಾತಿಯ ನಿಮಗೆ ಮಾಡಲು ಬೇರೆ ಕೆಲಸ ಸಿಗುವುದಿಲ್ಲವಾ'' ಎಂದು ಜಾತಿ ನಿಂದನೆ ಮಾಡುತ್ತಾ, ಅವರ ಕೆನ್ನೆಗೆ ಬಲವಾಗಿ ಹೊಡೆದಿದ್ದನು ಎಂದರೆ ಗೊತ್ತಿಲ್ಲ. ಆರೋಪಿ ಚಾಸಾ-1 ಇವರ ಫೋನ್ ನ್ನು ಕಿತ್ತುಕೊಂಡು ನೆಲಕ್ಕೆ ಒಗೆದಿದ್ದ ಎಂದರೆ ನಿಜ. ಆರೋಪಿ ಚಾಸಾ-1 ಇವರಿಗೆ ಇನ್ನೊಮ್ಮೆ ಈ ಜಾಗೆಗೆ ಬಂದರೆ ಕೈ ಕಾಲು ಮುರಿದು ಹಾಕುತ್ತೇನೆ ಎಂದು ಬೆದರಿಕೆ ಹಾಕಿದ್ದ ಎಂದರೆ ಗೊತ್ತಿಲ್ಲ. ಆ ಸಮಯದಲ್ಲಿ ಅಲ್ಲಿಗೆ ಚಾಸಾ-6 ಬಂದಾಗ ಆರೋಪಿ ಅಲ್ಲಿಂದ ಹೋಗಿದ್ದ ಎಂದರೆ ಗೊತ್ತಿಲ್ಲ. ಅದೇ ದಿನ ಚಾಸಾ-1 ಆಸ್ಪತ್ರೆಗೆ ಹೋಗಿ ಉಪಚಾರ ಪಡೆದು ದೂರು ಕೊಟ್ಟಿದ್ದರು ಎಂದರೆ ಗೊತ್ತಿಲ್ಲ.

2) ನಾನು ಆದಿನ ಘಟನೆಯನ್ನು ನೋಡಿ, ತಿಳಿದು, ತಾ: 28-02-2022 ರಂದು ಪೊಲೀಸರಿಗೆ ಈಗ ಓದಿದ ಹೇಳಿಕೆಯನ್ನು ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯ ಭಾಗವನ್ನು ನಿಶಾನೆ ಪಿ-10 ಎಂದು ಗುರುತಿಸಿದೆ. ನನಗೆ

ನಿಪಿ-10ರ ಬಗ್ಗೆ ಮಾಹಿತಿ ಇದ್ದರೂ ಈಗ ಆರೋಪಿಯೊಂದಿಗೆ ಸೇರಿ ಈ ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಆರೋಪಿ ಪರವಾಗಿ: ಶ್ರೀ ಟಿ.ವಿ.ಕೆ.ಎಸ್. ವಕೀಲರು ದ.ಪ್ರ.ಸಂ 231(2)ರ ಅರ್ಜಿ ಸಲ್ಲಿಸಿದ್ದರಿಂದ ಮುಂದೂಡಲಾಗಿದೆ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)
ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದರು.

(ಕೆ.ಎಸ್.ಗಂಗಣ್ಣವರ್)
ಪ್ರಧಾನ ಜಿಲ್ಲಾ ಮತ್ತು ಸತ್ರ/ವಿಶೇಷ ನ್ಯಾಯಾಧೀಶರು,
ಉಡುಪಿ.